ಬೆಂಗಳೂರು
ಕೇಂದ್ರ ವಿಶ್ವವಿದ್ಯಾಲಯ
BENGALURU
CENTRAL UNIVERSITY
Central College Campus, Dr. Ambedkar Veedhi, Bengaluru – 560 001.
Ph. No: 080 –22961016/ E-Mail ID: registrarbcu@gmail.com

ಸಂಖ್ಯೆ.BCU/Exam/Synd/Re-Exam/2019-20 /414 ದಿನಾಂಕ:29.01.2020

# ಸುತ್ತೋಲೆ

**ವಿಷಯ: ವಿಶ್ವವಿದ್ಯಾಲಯ ನಿಗಧಿ ಪಡಿಸಿರುವ ಪಠ್ಯಕ್ರಮಗಳನ್ನು ಮಾತ್ರ ಭೋದಿಸುವ ಕುರಿತು.**
ಉಲ್ಲೇಖ: ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ 10.01.2020.

*****

ನವೆಂಬರ್/ಡಿಸೆಂಬರ್ 2019ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ನಿಗಧಿಪಡಿಸಿರುವ ಪಠ್ಯಕ್ರಮವನ್ನು ಭೋದಿಸದೆ, ಬೇರೆ ಪಠ್ಯಕ್ರಮವನ್ನು ಭೋದಿಸಲಾಗಿರುವುದಾಗಿ ತಿಳಿಸಿ, ಈ ಕಾರಣದಿಂದ ಮೂರು ಕಾಲೇಜುಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಾಧ್ಯವಾಗಿರುವುದಿಲ್ಲವೆಂದು ವಿಶ್ವವಿದ್ಯಾಲಯದ ಗಮನಕ್ಕೆ ತಂದು, ಈ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ನಡೆಸುವಂತೆ ಈ ಕಾಲೇಜುಗಳ ಪ್ರಾಂಶುಪಾಲರುಗಳು ಮನವಿ ಮಾಡಿದ್ದರು. ಈ ಮನವಿಯನ್ನು ದಿನಾಂಕ 10.01.2020ರಂದು ನಡೆದ ಸಿಂಡಿಕೇಟ್ ಸಭೆಯ ಮುಂದೆ ಪರಿಗಣನೆಗೆ ಮಂಡಿಸಲಾಗಿತ್ತು. ಈ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳು ಒಂದು ಪಠ್ಯಕ್ರಮವನ್ನು ಅನುಸರಿಸಿದರೆ, ಈ ಮೂರು ಕಾಲೇಜುಗಳು ಮಾತ್ರ ಬೇರೆ ಪಠ್ಯಕ್ರಮವನ್ನು ಆಯಾ ಸೆಮೆಸ್ಟರಿನ ಆಯಾ ವಿಷಯದಲ್ಲಿ ಭೋದಿಸಿರುವುದು ಕಾಲೇಜಿನ ಪ್ರಾಂಶುಪಾಲರ ನಿರ್ಲಕ್ಷ್ಯವೆಂದು ಪರಿಗಣಿಸಿ, ಇದಕ್ಕೆ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳೇ ನೇರ ಹೊಣೆ ಎಂದು ಪರಿಗಣಿಸಲು ನಿರ್ಣಯ ತೆಗೆದುಕೊಂಡಿರುತ್ತದೆ.

ಆದುದರಿಂದ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು, ವಿಶ್ವವಿದ್ಯಾಲಯ ನಿಗಧಿಪಡಿಸಿರುವ ಪಠ್ಯಕ್ರಮವನ್ನು ಅನುಸರಿಸಬೇಕೆಂದು ತಿಳಿಸಲಾಗಿದೆ. ಒಂದು ವೇಳೆ ಬೇರೆ ಪಠ್ಯಕ್ರಮಗಳನ್ನು ಭೋದಿಸಿದರೆ, ಅದಕ್ಕೆ ಕಾಲೇಜಿನ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ. ಇದಕ್ಕೆ ವಿಶ್ವವಿದ್ಯಾಲಯ ಯಾವುದೇ ರೀತಿಯಲ್ಲಿಯೂ ಜವಾಬ್ದಾರಿಯಾಗುವುದಿಲ್ಲ. ಅಂಗೀಕೃತ ಪಠ್ಯಕ್ರಮದ ಬಗ್ಗೆ ಕುಲಸಚಿವ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು, ಬೆಂಗಳೂರು–560001 ಇವರಿಂದ ಮಾಹಿತಿ ಪಡೆಯಬಹುದಾಗಿದೆ.

ಕುಲಸಚಿವರು (ಮೌಲ್ಯಮಾಪನ)
29/01/2020

ಗೆ,

1. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ/ ಕೋ–ಆರ್ಡಿನೇಟರುಗಳಿಗೆ.

**ಪ್ರತಿಗಳು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
2. ಕುಲಪತಿ/ ಕುಲಸಚಿವ/ವಿತ್ತಾಧಿಕಾರಿಗಳ ವಿಶೇಷಾಧಿಕಾರಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು– ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟಿನಲ್ಲಿ ಅಪ್ಲೋಡ್ ಮಾಡಲು ತಿಳಿಸಿದೆ.